ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ: 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಹರ್ಷ | ಚಾಸಾಃ 11 |
| ತಂದೆಯ ಹೆಸರು | : | ಗೋಪಾಲಕೃಷ್ಣ ಭಟ್ | ಫ್ರಾಸಾಃ 7 |
| ಪ್ರಾಯ | : | 40 ವರ್ಷ | ದಿನಾಂಕಃ 18.11.2025 ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಡೈರೆಕ್ಟರ್ ಸಿಇಬಿಟಿ ಬೆಂಗಳೂರು | |
| ವಾಸಸ್ಥಳ | : | ಮಲ್ಲೆಶ್ವರ, ಬೆಂಗಳೂರು | |

ಸಾಕ್ಷಿಯು ತಮ್ಮ ಬೆಂಗಳೂರಿನ ಮಲ್ಲೇಶ್ವರ ಅಂಚೆ ಇಲಾಖೆ ಕಚೇರಿಯಲ್ಲಿರುವ ವಿಡಿಯೋ ಕಾನ್ಫರೆನ್ಸ್ ಕೊಠಡಿಯಲ್ಲಿ ಹಾಜರಿದ್ದು ತಾಂಡವ್ – ಟೆಕ್ನಾಲಜಿ ಅಸಿಸ್ಟೆಂಟ್ ಇವರನ್ನು ರಿಮೋಟ್ ಪಾಯಿಂಟ್ ಕೋ-ಆರ್ಡಿನೋಟರ್ ಎಂದು ನೇಮಿಸಿಲಾಯಿತು. ವಿಡಿಯೋ ಕಾನ್ಫರೆನ್ಸ್ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಜಿಟ್ಸಿಮೀಟ್ https://meet.jit.si/dpmng ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್‌ವರ್ಕ್ ನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿಗಳು ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರಿದ್ದಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಫೆಬ್ರವರಿ 2019 ರಿಂದ ಮೇ 2023 ರವರೆಗೆ ಕಂಕನಾಡಿ ಅಂಚೆಕಚೇರಿ, ಮಂಗಳೂರಿನಲ್ಲಿ ಹಿರಿಯ ಸೂಪರಿಟೆಂಡಂಟ್ ಆಫ್ ಪೋಸ್ಟ್ ಆಫೀಸ್, ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ಈ ಘಟನೆಗೆ ಸಂಬಂಧಿಸಿದಂತೆ ದಿ. 17.06.2021 ರಂದು ನನಗೆ ಕದ್ರಿ ಪೊಲೀಸ್ ಠಾಣೆಯ ಠಾಣಾಧಿಕಾರಿ ಇವರು ಒಂದು ನೊಂದಣಿ ಪಾರ್ಸೆಲ್ ಪಾರ್ಸಲ್

ನಂಬರ್ LB148954145FR ಗೆ ಸಂಬಂಧಪಟ್ಟಂತೆ ಅಜಿನಾಸ್ ಎನ್ನುವವರಿಗೆ ದಿ. 10.06.2021 ರಂದು ಡೆಲಿವೆರಿ ಆದ ಬಗ್ಗೆ ಇರುವ ದಾಖಲೆಯನ್ನು ಒದಗಿಸಬೇಕು ಎಂದು ಕೋರಿಕೆ ಪತ್ರವನ್ನು ಸಲ್ಲಿಸಿದ್ದರು.

3. ಸದರಿ ಕೋರಿಕೆ ಪತ್ರಕ್ಕೆ ನಾನು ದಿ. 22.06.2021 ರಂದು ಉತ್ತರವನ್ನು ನೀಡಿರುತ್ತೇನೆ. ಸದರಿ ಉತ್ತರ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–17 ಎಂದೂ ಸಾಕ್ಷಿ ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು.

4. ಪ್ರಾಸಾ–6 ರವರು ಕಂಕನಾಡಿ ಅಂಚೆ ಕಚೇರಿಯ ಬೀಟ್ ನಂಬರ್ 14 ರ ಪೋಸ್ಟ್‌ಮನ್ ಆಗಿದ್ದರು. ಪ್ರಾಸಾ–16 ರವರು ಸದರಿ ಅಜಿನಾಸ್ ಅವರಿಗೆ ಅಂತರಾಷ್ಟ್ರೀಯ ನೊಂದಣಿ ಪಾರ್ಸೆಲ್ ನ್ನು ಡೆಲಿವೆರಿ ಮಾಡಿ Delivery manifest ಗೆ ಸಹಿಯನ್ನು ಪಡೆದಿದ್ದರು.

5. ನಮ್ಮ ಅಂಚೆ ಕಚೇರಿಯಿಂದ ಸದರಿ ಅಜಿನಾಸ್ ಇವರಿಗೆ ಅಂತ್ರರಾಷ್ಟ್ರೀಯ ನೊಂದಣಿ ಪಾರ್ಸೆಲ್ ಡೆಲಿವೆರಿ ಆದ ಬಗ್ಗೆ Delivery manifest ನ ದೃಢೀಕೃತ ನಕಲನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಸದರಿ Delivery manifest ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–16 ಎಂದೂ ಸಾಕ್ಷಿ ಸಹಿಯನ್ನು ನಿಪಿ–16(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ, ವಕೀಲರಿಂದಃ**

6. ನಾನು ಹೇಳಿದ ರೀತಿಯಲ್ಲಿ 1 ನೇ ಆರೋಪಿಗೆ ಯಾವುದೇ ಅಂತ್ರರಾಷ್ಟ್ರೀಯ ನೊಂದಣಿ ಪಾರ್ಸೆಲ್ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.